**ಇಸಿಎ ಸಂಖ್ಯೆಃ 25/2023 ಪಿಡಬ್ಲ್ಯೂಃ 1**

**ದಿನಾಂಕಃ 31-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ**

1 ನೇ ಎದುರುದಾರರ ಪರ ವಕೀಲರನ್ನು ಕೂಗಿ ಕರೆಸಲಾಗಿ, ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಮೃತ ಅಜರ್ ಹೆಚ್.ಡಿ. ನನಗೆ ತಮ್ಮನಾಗಬೇಕು. ನಮ್ಮ ತಂದೆ ತಾಯಿಗೆ ನಾವಿಬ್ಬರೇ ಮಕ್ಕಳು. ನಾನು ಯಾವುದೇ ಕೆಲಸ ಮಾಡುವುದಿಲ್ಲ. ಸದ್ರಿ ನಾನು, ನನ್ನ ತಾಯಿ ಕೆಲಸ ಮಾಡುವುದಿಲ್ಲ. ನನ್ನ ತಂದೆ ಕೆಲಸ ಮಾಡುತ್ತಾರೆ ಅವರ ಆದಾಯ ಮೇಲೆ ನಾವು ಉಪಜೀವನ ಮಾಡುತ್ತೇವೆ. ನನ್ನ ತಂದೆ ಗಾರೆ ಕೆಲಸ ಮಾಡುತ್ತಾರೆ. ನನ್ನ ತಂದೆ ಪ್ರತಿದಿನ ಗಾರೆ ಕೆಲಸ ಮಾಡಿ 700 – 800 ಸಂಬಳ ತರುತ್ತಾರೆ. ನನ್ನ ತಮ್ಮ ತೀರಿಕೊಳ್ಳುವ ಪೂರ್ವದಲ್ಲಿ ನನ್ನ ತಂದೆ ಗಾರೆ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಈಗ ನನ್ನ ತಂದೆ ಗಾರೆ ಕೆಲಸದಿಂದ ತರತಕ್ಕ ಹಣದಿಂದ ನಾವು ಮೂರು ಜನ ಉಪಜೀವನ ನಡೆಸುತ್ತಿದ್ದೇವೆ. ನನಗೆ ಯಾವುದೇ ಕೆಲಸ ಮಾಡಲು ಬರುವುದಿಲ್ಲ.

ನನಗೆ ಒಂದು ಕಾಲು ಅಶಕ್ತ ಇರುವ ಕಾರಣ ಕೆಲಸ ಮಾಡಲು ಬರುವುದಿಲ್ಲ. ಆ ಕುರಿತು ಈ ದಾವೆಯಲ್ಲಿ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ನಿಜ. ನನ್ನ ತಮ್ಮ ತೀರಿಕೊಂಡ ನಂತರ ದೂರನ್ನು ನಾನೇ ದಾಖಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯ ಸತ್ಯದಿಂದ ಕೂಡಿದೆ. ದೂರಿನಲ್ಲಿ ನನ್ನ ಉದ್ಯೋಗ ವ್ಯಾಪಾರ ಎಂದು ಬರೆಸಿರುತ್ತೇನೆ

ಎಂದರೆ ನಿಜ. ಆ ಸಮಯದಲ್ಲಿ ನಾನು ಹಣ್ಣಿನ ವ್ಯಾಪಾರ ಮಾಡುತ್ತಿದ್ದೆ. ಆಗ ದಿನಕ್ಕೆ 500 – 600 ವ್ಯಾಪಾರ ಆಗುತ್ತಿತ್ತು. ಆ ಸಮಯದಲ್ಲಿ ನಾನು, ನನ್ನ ತಂದೆ ಮತ್ತು ತಾಯಿ ನನ್ನ ತಮ್ಮನ ಉತ್ಪಾದನೆಯಲ್ಲಿ ನಾವು ಅವಲಂಬಿತರಾಗಿರಲಿಲ್ಲ ಎಂದರೆ ಸರಿ ಅಲ್ಲ. ಮೃತ ನನ್ನ ತಮ್ಮ 1ನೇ ಎದುರುದಾರರ ಅಡಿಯಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ ಅಲ್ಲ.

ಸದ್ರಿ ನನ್ನ ತಮ್ಮ 1ನೇ ಎದುರುದಾರರ ಕಡೆಯಿಂದ ಹಣ ಪಡೆದ ಬಗ್ಗೆ ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲ. ಸದ್ರಿ ನನ್ನ ತಮ್ಮನಿಗೆ ತಿಂಗಳ ಸಂಬಳ ಖಾತೆಯ ಮೂಲಕ ಹಾಕುತ್ತಿದ್ದರು ಎಂದರೆ ಸರಿ ಅಲ್ಲ. ನಗದು ರೂಪದಲ್ಲಿ ಕೊಡುತ್ತಿದ್ದರು. ನಗದು ರೂಪದಲ್ಲಿ ಹಣ ಕೊಡುವ ಪೂರ್ವದಲ್ಲಿ ರಶೀದಿ ಪಡೆದು ಕೊಡುತ್ತಿರಲಿಲ್ಲ. 1ನೇ ಎದುರುದಾರ ಕಂಪನಿಯಲ್ಲಿ ವೆಲ್ಡಿಂಗ್ ಮಾಡಲು ಬೇರೆ ದೊಡ್ಡ ದೊಡ್ಡ ಕಂಪನಿಗಳಲ್ಲಿ ಕೆಲಸ ಹಿಡಿಯುತ್ತಾರೆ ಎಂದರೆ ನಿಜ. ಸದ್ರಿ 1ನೇ ಎದುರುದಾರ ಕಂಪನಿ ದೊಡ್ಡ ಕಂಪನಿ ಇರುವ ಕಾರಣ ಪ್ರತಿಯೊಂದಕ್ಕೂ ದಾಖಲೆಗಳನ್ನು ಇಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಸದ್ರಿ ಎದುರುದಾರ 1 ಕಂಪನಿಯವರು ದಾಖಲೆ ಇಟ್ಟಿಲ್ಲ ಎಂಬ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಎದುರುದಾರ 1 ಕಡೆಯಿಂದ ಪಡೆದಿಲ್ಲ.

ನನ್ನ ಸಹೋದರ ಎದುರುದಾರ ನಂಬ್ರ 1 ಕಡೆಯಿಂದ ಯಾವುದೇ ಕೆಲಸ ಮಾಡಿಲ್ಲ ಅದಕ್ಕೆ ಸಂಬಳ ಪಡೆದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆ ಕಾರಣದಿಂದ ಮೃತ ನನ್ನ ತಮ್ಮ ಮತ್ತು ಎದುರುದಾರ 1 ಇವರ ಮಧ್ಯೆ ಯಾವುದೇ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ಆ ಕಾರಣದಿಂದ 1ನೇ ಎದುರುದಾರನ ನಿರ್ದೇಶನದ ಮೇರೆಗೆ ನನ್ನ ಮೃತ ತಮ್ಮ ಕೆಲಸದಲ್ಲಿ ತೀರಿಕೊಂಡಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮೃತ ನನ್ನ ತಮ್ಮ ಮದುವೆಯಾಗಿರಲಿಲ್ಲ. ಎದುರುದಾರ ನಂಬ್ರ 1 ಮತ್ತು ನನ್ನ ತಮ್ಮನ ಮಧ್ಯೆ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇರದೇ ಇರುವ ಕಾರಣ ಎದುರುದಾರ ನಂಬ್ರ 2 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ. ಕೇವಲ ಪರಿಹಾರ ಪಡೆಯಲು ಎದುರುದಾರ ನಂಬ್ರ 1 ಮಾಲೀಕರು ಮತ್ತು ನನ್ನ ಮೃತ ತಮ್ಮ ಕಾರ್ಮಿಕ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

(ಓ.ಹೇ.ಕೇ.ಸ.)

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ